| JAIN COLLEGE V V Puram<br>1st PUC MOCK Paper – Feb. 2023 | Course: 1st year PUC<br>Subject: Kannada<br>Max. Marks: 100<br>Duration: 3:15 hour |
|---|---|

**I (ಅ) ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** 10 × 1 = 10

1) ಕಾಲುಗಳನ್ನು ಯಾವುದಕ್ಕೆ ಹೋಲಿಸಲಾಗಿದೆ.
ಅ) ಚಕ್ರಕ್ಕೆ ಆ) ಸೈಕಲ್ಲಿಗೆ ಇ) ಕಾಲಿಗೆ ಈ) ಟ್ರೈನಿಗೆ

2) ಚೆನ್ನಯ್ಯನು ಮಾಡುತ್ತಿದ್ದ ಕಾಯಕ ಯಾವುದು?
ಅ) ಗಾರೆಕೆಲಸ ಆ) ಮನೆಕೆಲಸ
ಇ) ಕುದುರೆಗೆ ಹುಲ್ಲುತರುವುದು ಈ) ದನಗಳಿಗೆ ಹುಲ್ಲು ತರುವುದು

3) ಕಪ್ಪೆಗಳು ಎಲ್ಲಿ ಹುಟ್ಟುತ್ತವೆ?
ಅ) ನೀರಿನಲ್ಲಿ ಆ) ಕಲ್ಲಿನಲ್ಲಿ ಇ) ಗಿಡದಲ್ಲಿ ಈ) ನೆಲದಲ್ಲಿ

4) ಅಖಂಡ ಕರ್ನಾಟಕದ ಚಕ್ರವರ್ತಿ ಯಾರು?
ಅ) ನೃಪತುಂಗ ಆ) ರಾಜಕುಮಾರ ಇ) ಪಂಪ ಈ) ಕುವೆಂಪು

5) ಊರಿನ ನೀರು ಎಲ್ಲಿ ನೆಲೆ ನಿಂತಿತ್ತು?
ಅ) ಕೆರೆಯಲ್ಲಿ ಆ) ನದಿಯಲ್ಲಿ ಇ) ಪಾತಾಳದಲ್ಲಿ ಈ) ಬಾವಿಯಲ್ಲಿ

6) ಮಾಸ್ತರರಿಗೆ ಇನ್ನೂ ಎಷ್ಟು ವರ್ಷ ಸೇವೆ ಇತ್ತು?
ಅ) ಹತ್ತು ವರ್ಷ ಆ) ಇಪ್ಪತ್ತು ವರ್ಷ ಇ) ಐದು ವರ್ಷ ಈ) ಆರು ವರ್ಷ

7) ಮಾಯಾದೇವಿ ದೇವಾಲಯ ಹೇಗಿತ್ತು?
ಅ) ತ್ರಿಭುಜದಲ್ಲಿ ಆ) ಚೌಕಾಕಾರದಲ್ಲಿ ಇ) ದೇವಸ್ಥಾನದಂತೆ ಈ) ಮಠದಂತೆ

8) ಕತ್ತಲೆಯ ನಿಜ ಜನಕ ಯಾರು?
ಅ) ಸೂರ್ಯ ಆ) ಚಂದ್ರ ಇ) ಸೈತಾನ ಈ) ಬೋಳೇಶಂಕರ

9) ಹುಡುಗಿಯರ ಹಾಡಿಗೆ ಬೋಳೇಶಂಕರ ಬಹುಮಾನವಾಗಿ ಏನನ್ನು ಕೊಡುವನು?
ಅ) ರಾಜ್ಯ ಆ) ಚಿನ್ನದ ನಾಣ್ಯ ಇ) ಅರಮನೆ ಈ) ದೇಶ

10) ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು?
ಅ) ಕೋವಿಗೆ ಆ) ರಾಜಕುಮಾರಿಗೆ
ಇ) ರಾಜನಿಗೆ ಈ) ರಾಜಕುಮಾರನಿಗೆ

11) **(ಆ) ಹೊಂದಿಸಿ ಬರೆಯಿರಿ.** 5 × 1 = 5

| | |
|---|---|
| (ಅ) ಮಗು ಮತ್ತು ಹಣ್ಣುಗಳು | (1) ಟೈಟಾನಿಕ್‌ನ ಹಡಗು |
| (ಆ) ಹೊಲಿಗೆ ಯಂತ್ರದ ಅಮ್ಮಿ | (2) ನಗುವ ಅಮೃತ ಶಿಲೆಗಳು |
| (ಇ) ದೇವರಿಗೊಂದು ಅರ್ಜಿ | (3) ಹಾಲು ಬಿಳಿ ಸೀರೆ |
| (ಈ) ಜೀವಕೆ ಇಂಧನ | (4) ಎಲಚಿ ಹಣ್ಣು |
| (ಉ) ಸುನಾಮಿ ಹಾಡು | (5) ಜೈವಿಕ ಇಂಧನ |

12) (ಇ) **ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** 1 × 5 = 5

ಉತ್ತರಗಳು : (ರೈತದಂಗೆ, ಖಗೋಳಶಾಸ್ತ್ರ, ನರಸಿಂಹಮೂರ್ತಿ, ಡಿ.ಸಿ.ಎಂ.ಮೇನಕೆ)

1. ಕುಟುಂಬ ಯೋಜನಾ ವಿಸ್ತರಣಾಧಿಕಾರಿಯ ಹೆಸರು _______
2. ಜ್ಯೋತಿಷ್ಯದ ಉಗಮವು _________ ದಲ್ಲಿ ಕಂಡುಬರುತ್ತದೆ.
3. ರಂಗರಾವ್ ಸ್ಥಾಪಿಸಿದ ಸಂಸ್ಥೆಯ ಹೆಸರು ______
4. ಶಕುಂತಲೆಯ ತಾಯಿಯ ಹೆಸರು ______
5. ಲೇಖಕರು ಸಿಪಾಯಿ ದಂಗೆಯನ್ನು _______ ಎಂದಿದ್ದಾರೆ.

**ಆ–ವಿಭಾಗ**

**II** (ಅ) **ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **4 x 2** = 8

13) ದುಶ್ಯಾಸನನು ಅಣ್ಣನಿಗೆ ತೋರಿದ್ದ ವಿನಯಶೀಲತೆ ಯಾವುದು?

14) ಲಕ್ಷ್ಮಣ ದುಃಖಿತನಾಗಲು ಕಾರಣವೇನು?

15) ಮಾದೇವನ ಶಿಶುಮಕ್ಕಳ ಹೆಸರೇನು?

16) ಭ್ರೂಣಾವಸ್ಥೆಯ ಮಗುವು ಏಕೆ ಗಾಬರಿಗೊಂಡಿದೆ?

17) ಅಮಾಯಕರಿಗೆ ಕವಿ ನೀಡುವ ಆಶ್ವಾಸನೆ ಯಾವುದು?

(ಆ) **ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3 x 2 = 6**

18) ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ?

19) ಸಾಮಾಜಿಕ ಸುಧಾರಣಾ ಚಳುವಳಿಯ ಪ್ರಮುಖ ನಾಯಕರನ್ನು ಹೆಸರಿಸಿ.

20) ಆರ್ಯ ಪುತ್ರ ಬಂದಿದ್ದಾನೆ ಎಂದಾಗ ಶಕುಂತಲೆಯ ಪ್ರತಿಕ್ರಿಯೆ ಏನು?

21) ರೈತರನ್ನು ಶೋಷಣೆ ಮಾಡಿದವರು ಯಾರು?

**III** (ಅ) **ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** 4 **x** 2 = 8

22) ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ?

23) ರಾಜಕುಮಾರಿಯ ಹೊಟ್ಟೆನೋವು ವಾಸಿ ಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗೂರ ಸಾರಿಸುತ್ತಾರೆ?

24) ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?

25) ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?

26) ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?

**IV** (ಅ) **ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** 2 **x** 3 = 6

27) "ಗಾಂಡಿವಿಯಲ್ತು ಪಿನಾಕಪಾಣಿಯುಂ ನೆಱೆಯನ್"

28) ಭಾಷೆಹೀನರ ಕಂಡು ನಾಚಿಕೆಯಾಯಿತ್ತು

29) ಕಾಯಿಯಲ್ಲೇ ನಿನ್ನ ಕೆಡವದಿರಲಿ

(ಆ) **ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** 1 **x** 3 = 3

30) ಇದ್ದು ನಾನು ಯಾವ ರಾಜ್ಯ ಆಳಬೇಕು?

31) ಜ್ಯೋತಿಷ್ಯ ಒಂದು ವಾಣಿಜ್ಯವಾಗಿದೆ.

**(ಇ) ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** 1 x 3 = 3

32) ಹಸಿರು ಸಾಮ್ರಾಜ್ಯದ ನಮ್ರ ಪ್ರಜೆ ಕಾಣಯ್ಯ ನಾನು.

33) ರಾಜರಾಣಿಯರಿಂದ ಹಿಡಿದು ಎಲ್ಲರೂ ದುಡಿಯುತ್ತಾರೆ.

**V (ಅ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** 2 x 4 = 8

34) ಚೆನ್ನಯ್ಯನಿಗೆ ಶಿವನು ಗಣಪದವಿಯನ್ನು ನೀಡಿದ ಪ್ರಸಂಗವನ್ನು ನಿರೂಪಿಸಿ.

35) ಸೀತೆ ಹಿಂದಿನ ಘಟನೆಗಳನ್ನು ನೆನಪಿಸಿಕೊಂಡು ಹೇಗೆ ದುಃಖಿಸುತ್ತಾಳೆ?

36) ಕನಕದಾಸರು 'ತಲ್ಲಣಿಸದಿರು ಮನವೆ' ಎನ್ನಲು ಕಾರಣವೇನು?

37) ಸರಸ್ವತಿಯ ಸಚಿವ ಮಂಡಲವನ್ನು ಕುರಿತು ಬರೆಯಿರಿ.

**(ಆ) ಕೆಳಗಿನ ಯಾವುದಾದರು ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** 1 x 4 = 4

38) ರಾಗಿಮುದ್ದೆ ಕುರಿತು ಇರುವ ಹತ್ತಾರು ಮೆಚ್ಚುಗೆಯ ನಂಬಿಕೆಯ ಮಾತುಗಳಾವುವು?

39) 'ಅನಾಥ ಬಾಲಕರಾಶ್ರಮ'ವನ್ನು ಶಾಸ್ತ್ರಿ ಮಾಸ್ತರು ಹೇಗೆ ಪ್ರಾರಂಭಿಸಿದರು? ಅದರ ಉದ್ದೇಶವೇನು?

40) ಹುಲಿಯಿಂದ ಪಾರಾಗಲು ನಾಪಿತ ಕಲ್ಪಿಸಿದ ಕತೆ ಯಾವುದು?

**(ಇ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** 1 × 4 = 4

41) ಬೋಳೇಶಂಕರ ಮತ್ತು ಅವನ ಅಣ್ಣಂದಿರನ್ನು ಭಾಗವತರು ಹೆಗೆ ಪರಿಚಯಿಸುತ್ತಾರೆ?

42) ತನ್ನ ಕನಸನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು?

43) ಯುದ್ಧ ಮಾಡಲು ಸೈನಿಕರು ಏಕೆ ನಿರಾಕರಿಸುತ್ತಾರೆ.

## 'ಉ' ವಿಭಾಗ

**VI (ಅ) ಕೆಳಗಿನ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ.** 1 × 5 = 5

44) ಹರಿಬೇಡೆ ಕವಚಮಂ ನೀ

ನರಿದಿತ್ತಯ್ ಕೊಂತಿ ಬೇಡೆ ಬೆಗಡದೆ ಕೊಟ್ಟಯ್
ಪುರಿಗಣೆಯಂ ನಿನಗೆಣೆ ಕಸ
ವರಗಲಿ ಮೆಯ್ಗಲಿಯುಮಾವನಂಗಾಧಿಪತೀ

**ಅಥವಾ**

ಬೂಟು ಕಾಲಿನೇಟು ಬಿದ್ದರಿನ್ನು ಸುಮ್ಮನಿರುವರೆ?
ಕಿವಿಯ ತುಂಬ ಕಲ್ಲಿನೇಟು ತಿಂದ ಕುನ್ನಿ ಮರಿಯ ಕೂಗು।
ಕೇಳದಲ್ಲೋ ಗರ್ಜನೆ.
ಕಿವಿ ಬಿರಿಯುವ ಮೃಗರಾಜನ ತುಂಬುಕೊರಳ ಗರ್ಜನೆ
ರಕ್ತಪಾನಮತ್ತ ಈ ರಾಕ್ಷಸಗಣ ಹತ್ಯಕೆ
ಕ್ಷಾತ್ರವಧೆಗೆ ನಿಂತ ಜಾಮದಗ್ನಿಯಂತೆ ಕೆರಳಿ ನಿಂತು
ಗಂಡು ಗೊಡಲಿಯುಟ್ಟು ಜನತೆ ಹೆಜ್ಜೆಯಿಡುವುದೆಂದಿಗೆ,
ನಡೆವುದೆಂದು ಮುಂದಕೆ?

]ಭಾಷಾಭ್ಯಾಸ

VIII (ಅ) ಈ ಕೆಳಗಿನ ಪ್ರಶ್ನೆಗಳಲ್ಲಿ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 6 × 2 = 12

45) ಎರಡು ಪದಗಳ ಅರ್ಥ ಬರೆಯಿರಿ – ಭವ, ತುರಗ, ದಿನಕರ

46) ಎರಡು ಪದಗಳ ತದ್ಭವ ಬರೆಯಿರಿ – ಆಶ್ಚರ್ಯ, ಪಕ್ಷಿ, ಶ್ರೀ

47) ಎರಡು ಪದಗಳನ್ನು ಬಿಡಿಸಿ ಬರೆಯಿರಿ – ಉದ್ದಗಲ, ವೈದ್ಯಾಧಿಕಾರಿ, ಕಳೆವುದೆಂದಿಗೆ

48) ಎರಡು ಪದಗಳ ಸಮಾನಾರ್ಥಕಗಳನ್ನು ಬರೆಯಿರಿ – ಅಗ್ನಿ, ಕಣ್ಣು, ಇಳೆ

49) ಎರಡು ಪದಗಳ ವಿರುದ್ಧ ಪದಗಳನ್ನು ಬರೆಯಿರಿ – ಲೌಕಿಕ, ನಂಬಿಕೆ, ಸಹಕಾರ

50) ಎಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ – ಅಜಗಜಾಂತರ, ಅಡಿಪಾಯ ಮೊರೆಹೋಗು

51) ಎರಡು ದ್ವಿರುಕ್ತಿಗಳನ್ನು ಬರೆಯಿರಿ.

(ಆ) ಈ ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ. 1 x 5 = 5

52) ಜಾಹಿರಾತುಗಳು

**ಅಥವಾ**

ಯೋಗಾಭ್ಯಾಸ

(ಇ) ಪತ್ರಲೇಖನ 1 × 4 = 4

53) ನಿಮ್ಮ ಪ್ರವಾಸದ ಅನುಭವ ಕುರಿತು ಗೆಳೆಯ / ಗೆಳತಿಗೆ ಪತ್ರ ಬರೆಯಿರಿ.

**ಅಥವಾ**

ನಿಮ್ಮ ಕಾಲೇಜಿನಲ್ಲಿ ಗ್ರಂಥಾಲಯ ಕೇಳಿ ಪ್ರಾಂಶುಪಾಲರಿಗೆ ಪತ್ರ ಬರೆಯಿರಿ.

(ಈ) ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ. 1 × 4 = 4

54) ಆಳಾಗಬಲ್ಲವನು ಅರಸಾಗುವ

**ಅಥವಾ**

ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

*****